# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 494

2 ಸದಸ್ಯರ ಹೆಸರು : ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ)

3 ಉತ್ತರಿಸಬೇಕಾದ ದಿನಾಂಕ : 11.12.2025

4 ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಡಿವೈಎಸ್‌ಪಿ ಹುದ್ದೆಗಳಿಗೆ ಪದೋನ್ನತಿ ಮತ್ತು ನೇರ ನೇಮಕಾತಿಗೆ ನಿಗಧಿಪಡಿಸಿದ್ದ ಹುದ್ದೆಗಳ ಪ್ರಮಾಣವು 50:50 ಇದ್ದು, ನಂತರ 66:33ಕ್ಕೆ ಇಳಿಸಲಾಗಿದ್ದು ತದನಂತರ 80:20 ಪ್ರಮಾಣಕ್ಕೆ ಯಾವ ನಿಯಮಗಳ ಆಧಾರದ ಮೇಲೆ ಇಳಿಕೆ ಮಾಡಲಾಗಿದೆ; (ಇಲಾಖಾ ಆದೇಶಗಳ ಸಹಿತ ವಿವರ ನೀಡುವುದು); | ಕರ್ನಾಟಕ ರಾಜ್ಯ ಪೊಲೀಸ್ ಸೇವೆಗಳಿಗೆ ಸಂಬಂಧಿಸಿದಂತೆ ಅಧಿಸೂಚನೆ ಸಂ. ಜಿಎಡಿ 36 ಜಿಆರ್‌ಆರ್ ದಿನಾಂಕ:08.07.1960 ರಲ್ಲಿ ಡಿವೈಎಸ್‌ಪಿ(ಸಿವಿಲ್) ವೃಂದದಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿ ಹುದ್ದೆಗಳನ್ನು 50:50 ಅನುಪಾತದಲ್ಲಿ ನೇಮಕ ಮಾಡಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಸಲಾಗಿರುತ್ತದೆ.<br><br>ತದನಂತರ ಅಧಿಸೂಚನೆ ದಿನಾಂಕ:06.10.1967 ರಲ್ಲಿ ಡಿವೈಎಸ್‌ಪಿ(ಸಿವಿಲ್) ವೃಂದದ ನೇರ ನೇಮಕಾತಿ ಮತ್ತು ಮುಂಬಡ್ತಿಗೆ 33.1/3 : 66.2/3 ರ ಅನುಪಾತದಲ್ಲಿ ನೇಮಕ ಮಾಡಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಸಲಾಗಿರುತ್ತದೆ.<br><br>ಪ್ರಸ್ತುತ ಅಧಿಸೂಚನೆ ಸಂ. ಹೆಚ್‌ಡಿ 162 ಪೊಸಿಅ 2003, ದಿನಾಂಕ:23.12.2004 ರಲ್ಲಿ ಡಿವೈಎಸ್‌ಪಿ(ಸಿವಿಲ್) ವೃಂದದ ಮಂಜೂರಾತಿ ಬಲದಲ್ಲಿ ನೇರ ಮತ್ತು ಮುಂಬಡ್ತಿ ಹುದ್ದೆಗಳನ್ನು 20:80 ಅನುಪಾತದಲ್ಲಿ ನೇಮಕ ಮಾಡಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಸಲಾಗಿರುತ್ತದೆ.<br><br>ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸರ್ಕಾರದ ನೀತಿ ಮತ್ತು ಇಲಾಖೆಯ ಅವಶ್ಯಕತೆಗೆ ಅನುಗುಣವಾಗಿ ರೂಪಿಸಲಾಗಿರುತ್ತದೆ. |
| (ಆ) | ತೆಲಂಗಾಣ ಮತ್ತು ಆಂದ್ರಪ್ರದೇಶ ರಾಜ್ಯಗಳಲ್ಲಿ ಡಿವೈಎಸ್‌ಪಿ ನೇಮಕಾತಿಗೆ ಶೇಕಡ 66:33 33:66 ಅನುಪಾತದಲ್ಲಿದ್ದು, ರಾಜ್ಯದಲ್ಲಿ ಶೇಕಡ 20ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನಿಗಧಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;(ಕಾರಣ ಸಹಿತ ವಿವರ ನೀಡುವುದು); | |
| (ಇ) | ಡಿವೈಎಸ್‌ಪಿ ಹುದ್ದೆಗಳಿಗೆ ಸಂಬಂಧಿಸಿದಂತೆ ವೇಕೆನ್ಸಿ ರಿಜಿಸ್ಟರ್ ನಲ್ಲಿ ತಪ್ಪುಗಳಾಗಿರುವುದು ನಿಜವೇ; ಸದರಿಯವರ ಜೇಷ್ಠತಾ ಪಟ್ಟಿಯಲ್ಲಿ ನ್ಯೂನತೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಜೇಷ್ಠತಾ ಪಟ್ಟಿಯನ್ನು ಬೇಕೆಂದು ತಪ್ಪು ಮಾಡಿರುವ ಅಧಿಕಾರಿಗಳ ಮೇಲೆ ಯಾವ ಶಿಸ್ತು ಕ್ರಮ ಕೈಗೊಳ್ಳಲಾಗುವುದು; | ಸರ್ಕಾರದ ಅಧಿಸೂಚನೆ ಸಂ.ಹೆಚ್‌ಡಿ 268 ಪಿಇಜಿ 2021, ದಿನಾಂಕ: 27.01.2022 ರಲ್ಲಿ ದಿನಾಂಕ: 01.1.2021ರಲ್ಲಿದ್ದಂತೆ ಡಿವೈಎಸ್‌ಪಿ(ಸಿವಿಲ್) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ಸ್ವೀಕೃತವಾದ ಅಕ್ಷೇಪಣೆಗಳನ್ನು ಪರಿಶೀಲಿಸಿ, ಅಧಿಸೂಚನೆ ಸಂ.ಹೆಚ್‌ಡಿ 268 ಪಿಇಜಿ 2021, ದಿನಾಂಕ: 07.03.2022 ರಲ್ಲಿ ಅಂತಿಮಗೊಳಿಸಲಾಗಿರುತ್ತದೆ.<br><br>ಆದರೆ ಸದರಿ ಜೇಷ್ಠತಾ ಪಟ್ಟಿಯಲ್ಲಿ ಮುಂಬಡ್ತಿ ಹೊಂದಿರುವ ಡಿವೈಎಸ್‌ಪಿ ಸಂಖ್ಯೆ ಹೆಚ್ಚಾಗಿರುವುದಾಗಿ ಮತ್ತು ಬ್ಲಾಕ್ ವಾರು ರಿಕ್ತ ಸ್ಥಾನದ ಮಾಹಿತಿಯನ್ನು ಪ್ರಕಟಿಸದೇ ಇರುವ ಸಂಬಂಧ ಶ್ರೀಮತಿ ಅನುಷಾ ಮತ್ತು ಇತರರು ಮಾನ್ಯ ಕೆಎಸ್‌ಎಟಿ ಯಲ್ಲಿ ಅರ್ಜಿ ಸಂ.5238- |

| | | |
|---|---|---|
| | | 5263/2023 ನ್ನು ದಾಖಲಿಸಿರುತ್ತಾರೆ.<br><br>ಮಾನ್ಯ ಕೆಎಸ್‌ಎಟಿಯು ಅರ್ಜಿ ಸಂ.5238-5263/2023ರ ಬಾಬ್ತು ದಿನಾಂಕ: 06.02.2025ರಂದು ನೀಡಿರುವ ತೀರ್ಪಿನನ್ವಯ ಆದೇಶದನ್ವಯ ಡಿವೈಎಸ್‌ಪಿ (ಸಿವಿಲ್) ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸುವ ಕುರಿತು ಸದರಿ ವಿಷಯದಲ್ಲಿ ಪರಿಣಿತಿ ಹೊಂದಿರುವ ಶ್ರೀ ಬಿ.ಕೆ. ಚಿನ್ನಮಾರಯ್ಯ, ನಿವೃತ್ತ ಸಮಾಜ ಕಲ್ಯಾಣಾಧಿಕಾರಿ ರವರನ್ನು ಸಲಹೆಗಾರರನ್ನಾಗಿ ನೇಮಿಸಿ ಆದೇಶಿಸಲಾಗಿದೆ. ಅದರಂತೆ ಸದರಿ ನಿವೃತ್ತ ಅಧಿಕಾರಿ ಯವರು ದಿನಾಂಕ: 08.09.2025 ರಿಂದ ವಹಿಸಲಾದ ಕರ್ತವ್ಯವನ್ನು ಪ್ರಾರಂಭಿಸಿದ್ದು, ಡಿವೈಎಸ್‌ಪಿ (ಸಿವಿಲ್) ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. |
| (ಈ) | ಸಿ ಅಂಡ್ ಆರ್ ನಿಯಮದಡಿಯಲ್ಲಿ ಡಿವೈಎಸ್‌ಪಿಗಳಿಗೆ 2007, 2008, 2010 ನೇ ಸಾಲಿನಲ್ಲಿ ನೇರ ನೇಮಕಾತಿ ಮೂಲಕ ನೇಮಕವಾಗಿರುವವರಿಗೆ 5 ವರ್ಷದಲ್ಲಿ ಮುಂಬಡ್ತಿ ನೀಡಲಾಗಿದ್ದು, 2017ರಲ್ಲಿ ನೇಮಕವಾಗಿರುವವರಿಗೆ ಇದುವರೆಗೆ ಮುಂಬಡ್ತಿ ನೀಡದಿರಲು ಕಾರಣಗಳೇನು; (ವಿವರ ನೀಡುವುದು)<br>ರಾಜ್ಯದಲ್ಲಿ ಐಪಿಎಸ್ ಅಧಿಕಾರಿಗಳಿಗೆ ಮಾತ್ರ ಪ್ರತಿವರ್ಷ ಡಿಸೆಂಬರ್ 31 ರಂದು ಜೇಷ್ಠತಾ ಪಟ್ಟಿ ತಯಾರಿಸಿ ಮುಂಬಡ್ತಿ ನೀಡಲಾಗುತ್ತಿದ್ದು, ಡಿವೈಎಸ್‌ಪಿ ಗಳಿಗೆ ಪ್ರತಿ ವರ್ಷ ಡಿವೈಎಸ್‌ಪಿಗಳ ಜೇಷ್ಠತಾ ಪಟ್ಟಿ ತಯಾರಿಸಿ, ಮುಂಬಡ್ತಿ ನೀಡದಿರಲು ಕಾರಣಗಳೇನು: ಇದರಿಂದಾಗಿ ರಾಜ್ಯದಿಂದ ನೇರ ನೇಮಕಾತಿ ಆಗಿರುವ ಡಿವೈಎಸ್.ಪಿಗಳಿಗೆ ಮುಂಬಡ್ತಿ ನೀಡದೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೂಡಲೇ ಮುಂಬಡ್ತಿ ನೀಡಲಾಗುವುದೇ; | ಪೊಲೀಸ್ ಅಧೀಕ್ಷಕರು (ಸಿವಿಲ್) (ನಾನ್ ಐಪಿಎಸ್) ವೃಂದದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮುಂಬಡ್ತಿ ಅರ್ಹತೆಗೆ ಡಿವೈಎಸ್‌ಪಿ (ಸಿವಿಲ್) ಹುದ್ದೆಯಲ್ಲಿ 8 ವರ್ಷಗಳ ಸೇವೆಯನ್ನು ನಿಗಧಿಪಡಿಸಿದ್ದು, 8 ವರ್ಷಗಳ ಸೇವೆ ಸಲ್ಲಿಸಿದ ಅಧಿಕಾರಿಗಳು ಲಭ್ಯವಿಲ್ಲದಿದ್ದಲ್ಲಿ, 5 ವರ್ಷಗಳ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಗಳನ್ನು ಪರಿಗಣಿಸಬೇಕಿದೆ.<br><br>ಸದರಿ ಮುಂಬಡ್ತಿಯನ್ನು ಡಿವೈಎಸ್‌ಪಿ(ಸಿವಿಲ್) ವೃಂದದ ಜೇಷ್ಠತಾ ಪಟ್ಟಿಯ ಹಾಗೂ ಕಾಲ ಕಾಲಕ್ಕೆ ಪೊಲೀಸ್ ಅಧೀಕ್ಷಕರು (ಸಿವಿಲ್)(ನಾನ್ ಐಪಿಎಸ್) ವೃಂದದ ರಿಕ್ತ ಸ್ಥಾನದ ಲಭ್ಯತೆಯನ್ವಯ ಮುಂಬಡ್ತಿ ನೀಡಲಾಗುತ್ತಿದೆ.<br><br>ಆದರೆ, ಮಾನ್ಯ ಕೆಎಸ್‌ಎಟಿ ಅರ್ಜಿ ಸಂ.5238-5263/2023ರ ದಿನಾಂಕ:06.02.2025ರ ಆದೇಶದನ್ವಯ ಡಿವೈಎಸ್‌ಪಿ (ಸಿವಿಲ್) ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ಪೂರ್ಣಗೊಂಡ ನಂತರ ಅರ್ಹತೆಯ ಮೇರೆಗೆ ಪೊಲೀಸ್ ಅಧೀಕ್ಷಕರು(ಸಿವಿಲ್)(ನಾನ್ ಐಪಿಎಸ್) ವೃಂದಕ್ಕೆ ಮುಂಬಡ್ತಿ ನೀಡಲಾಗುತ್ತದೆ. |
| (ಉ) | ಕೆ.ಎ.ಟಿ ನ್ಯಾಯಾಲಯದ ಆದೇಶದಂತೆ ದಿ:30-07-2025 ರಂದು ರಚಿಸಲಾಗಿರುವ ಏಕ ಸದಸ್ಯ ಪೀಠವು ಕಾರ್ಯನಿರ್ವಹಿಸುತ್ತಿದ್ದು,<br>ನ್ಯಾಯಾಲಯದ ಆದೇಶ ಬಂದು 10 ತಿಂಗಳು ಆಗಿದ್ದರು ಪೀಠವು ಎಷ್ಟು ದಿನದಲ್ಲಿ ವರದಿಯನ್ನು ಪಡೆದು ಜೇಷ್ಠತಾ ಪಟ್ಟಿಯನ್ನು ಯಾವಾಗ ಸಿದ್ಧಪಡಿಸಿ ಮುಂಬಡ್ತಿ ನೀಡಲು ಯಾವ ರೀತಿ ಕ್ರಮ ಕೈಗೊಳ್ಳಲಾಗುತ್ತದೆ? | ಮಾನ್ಯ ಕೆಎಸ್‌ಎಟಿ ಅರ್ಜಿ ಸಂ.5238-5263/2023ರ ದಿನಾಂಕ:06.02.2025ರ ಆದೇಶದನ್ವಯ ಡಿವೈಎಸ್ ಪಿ(ಸಿವಿಲ್) ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಸದರಿ ವಿಷಯದಲ್ಲಿ ಪರಿಣಿತಿ ಹೊಂದಿರುವ ಶ್ರೀ ಬಿ.ಕೆ. ಚಿನ್ನಮಾರಯ್ಯ, ನಿವೃತ್ತ ಸಮಾಜ ಕಲ್ಯಾಣಾಧಿಕಾರಿ ರವರನ್ನು ಸಲಹೆಗಾರರನ್ನಾಗಿ ನೇಮಿಸಿ ಆದೇಶಿಸಲಾಗಿದೆ. ಅದರಂತೆ ಸದರಿ ನಿವೃತ್ತ ಅಧಿಕಾರಿಯವರು ದಿನಾಂಕ:08.09.2025 ರಿಂದ ವಹಿಸಲಾದ ಕರ್ತವ್ಯವನ್ನು ಪ್ರಾರಂಭಿಸಿದ್ದು, ಡಿವೈಎಸ್‌ಪಿ(ಸಿವಿಲ್) |

| | | |
|---|---|---|
| | | ವೃಂದದ ವಹಿಗಳನ್ನು ಪರಿಷ್ಕರಿಸಲು ಪೂರ್ಣವಾಗಿ ದಾಖಲೆಗಳು ಸಂಗ್ರಹವಾಗಿರುವುದಿಲ್ಲವಾದ್ದರಿಂದ ಹಾಗೂ ವೇಕನ್ಸಿ ವಹಿಯನ್ನು ಇಲ್ಲಿಯವರೆಗೆ ಸಂಗ್ರಹಿಸಿರುವ ಆದೇಶ/ದಾಖಲೆವಾರು ಮತ್ತು ದಿನಾಂಕ: 01.11.1956 ರಿಂದ 1982 ರವರೆಗೆ ಹಾಗೂ ತದನಂತರ, 2021-22 ರವರೆಗೆ ಹೊರಡಿಸಿರುವ ಜೇಷ್ಠತಾ ಪಟ್ಟಿಗಳ ಮಾಹಿತಿವಾರು ತಯಾರಿಸುವುದು ಅನಿವಾರ್ಯವಾಗಿರುವುದರಿಂದ ಡಿವೈಎಸ್‌ಪಿ(ಸಿವಿಲ್) ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು $2^{1/2}$ ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಲಾಗಿದೆ.<br><br>ಜೇಷ್ಠತಾ ಪಟ್ಟಿ ಅಂತಿಮಗೊಂಡ ನಂತರ, ಡಿವೈಎಸ್‌ಪಿ (ಸಿವಿಲ್) ವೃಂದದಿಂದ ಪೊಲೀಸ್ ಅಧೀಕ್ಷಕರು (ಸಿವಿಲ್) (ನಾನ್ ಐಪಿಎಸ್) ವೃಂದದ ರಿಕ್ತ ಸ್ಥಾನದ ಲಭ್ಯತೆಯನ್ವಯ ಮುಂಬಡ್ತಿ ನೀಡಲಾಗುತ್ತದೆ. |

ಸಂಖ್ಯೆ: ಒಇ 436 ಪಿಇಜಿ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು